ಹಿನ್ನೆಲೆಯಾಗಿರುತ್ತದೆ. ಅದೇ ಮಾರ್ಗದರ್ಶಕ. ಜ್ಞಾನಕಿರಣಗಳನ್ನು ತೂರಿ ಮಾರ್ಗದರ್ಶನ ಮಾಡುವುದಕ್ಕೆ ನಿಮ್ಮ ಅಂತರಾತ್ಮನು ಸದಾ ಸಿದ್ಧನೇ ಇದ್ದನಲ್ಲವೇ? ಅಂತರಾತ್ಮನ ಬೆಳಕಿನಲ್ಲಿ, ಕರ್ಮಮಾರ್ಗದ ಎಲ್ಲ ಹಂತಗಳಲ್ಲಿಯೂ ಪರಿಶ್ರಮಿಸಿದಿರಿ.

ಬಾಪು: ಕೂಡಲಸಂಗನ ರಾಜತೇಜದಲ್ಲಿ, ಮಂತ್ರಿಪಟ್ಟವನ್ನೇರಿ ಕುಳಿತ ನಿಮ್ಮಲ್ಲಿಗೆ ಎಲ್ಲ ಸಂಪದಗಳೂ ಹರಿದು ಬರುವುದು ಆಶ್ಚರ್ಯವೇ? ಪರಮಾತ್ಮನ ಪಾದಗಳನ್ನು ಹಿಡಿದವನ ಪಾದಗಳು ಜಗತ್ತಿನ ಮುಡಿಗಿಂತ ಮೇಲಕ್ಕಿರುವವು. ಸುಳ್ಳಲ್ಲ.

ಅಣ್ಣ: ಹಾಗನ್ನುವುದು ನನಗೆ ಸರಿಯೆನಿಸದು. ಜಗತ್ತೆಲ್ಲ ಕೂಡಲಸಂಗ-ಲಿಂಗ-ಜಂಗಮಸ್ವರೂಪ, ನಾನು ಮಾತ್ರ ಭಕ್ತ.

ಬಾಪು: ಇದೇ ಇರುವೆಯಾಗಿ ಸಕ್ಕರೆಯ ಮೇಯುವ ದಾರಿ. ಭಕ್ತನೆಂದರೆ ಜೀವ ಶಿಶು. ತಂದೆಯ ಐಶ್ವರ್ಯಗಳಿಗೆಲ್ಲ ಶಿಶುವು ಹಕ್ಕುದಾರನೇ. ಆಟ ಸಾಕಾಗಿ ಓಡಿಬಂದ ಶಿಶುವನ್ನು ತಾಯಿ ಎತ್ತಿಕೊಂಡಂತೆ, ಕಲ್ಯಾಣದಿಂದ ಕಾಲುಕಿತ್ತು ಕಪ್ಪಡಿಗೆ ಬಂದಕೂಡಲೇ ಸಂಗಮನಾಥನು ಕೈಚಾಚಿ ಕುವರನನ್ನು ಕರಕೊಂಡನು.

ಅಣ್ಣ: ನಿಮ್ಮ ಮರಣವೂ ಅಸಾಮಾನ್ಯ ಶರಣಗುಣವನ್ನು ಪ್ರಕಟಿಸಿತು. ಕರ್ಮಯೋಗಿಯ ಸಾಧನವೆಂದರೆ ಹೋರಾಟವಲ್ಲವೇ? ಅವನು ಹೋರಾಡುತ್ತಲೇ ಜೀವಿಸಬೇಕು, ಹೋರಾಡುತ್ತಲೇ ಮರಣವನ್ನು ಅಪ್ಪಬೇಕು. ಗುಂಡಿನೇಟಿಗೆ ಎದೆಕೊಟ್ಟದ್ದೂ, ಏಟಿನ ನೋವಿಗೆ 'ರಾಮ'ನೆಂದು ಉಚ್ಚರಿಸಿದ್ದೂ ವೀರಯೋಧನ ಲಕ್ಷಣವಲ್ಲವೇ? ದೇವಸೈನಿಕನಾಗಿ ಪ್ರಾರ್ಥನಾಮಂದಿರದಲ್ಲಿ, ದೈವಸ್ವರೂಪವಾದ ಸಾಮಾಜಿಕರ ಮಧ್ಯದಲ್ಲಿ ಶಾಂತಿಯಿಂದ ಮರಣವನ್ನು ಸ್ವಾಗತಿಸಿದ್ದು ಏತರ ಕುರುಹು?

ಬಾಪು: ನಾನು ಕರ್ಮಕ್ಕೆ ಅದೆಂಥ ಬೆಲೆ ಕೊಟ್ಟರೂ ಅದು ನಿಮ್ಮ 'ಕಾಯಕ'ಕ್ಕೆ ಸರಿಹೊಂದುವುದಿಲ್ಲ. ನನ್ನ ಕರ್ಮದಲ್ಲಿ ಅದೆಷ್ಟು ಉದಾರ ಬುದ್ಧಿಯಿದ್ದರೂ ಅದೆಷ್ಟು ವಿಶಾಲಭಾವನೆಯಿದ್ದರೂ ಅದಕ್ಕೆ ಆರ್ಥಿಕ ಸ್ವರೂಪವನ್ನೋ ರಾಜಕೀಯ ಸ್ವರೂಪವನ್ನೋ ಕೊಡುವುದು ಅನಿವಾರ್ಯವಾಯಿತು. ನಿಮ್ಮ 'ಕಾಯಕ'ವು ಧಾರ್ಮಿಕವಾಗಿತ್ತು; ಅದು ಹಾರ್ದಿಕವೂ ಆಗಿದ್ದರಿಂದ ಚಿತ್ತ ಶುದ್ಧಿಗೂ ಬಡತನ ನಿವಾರಣೆಗೂ ಕಾರಣವಾಗುತ್ತಿತ್ತು.

ಅಣ್ಣ: ನಾನು ಮಗಿಯಲ್ಲಿ ಪಾನಕ ಮಾಡುವ ಎತ್ತುಗಡೆ ನಡಿಸಿದರೆ ನೀವು ಹರವಿಯಲ್ಲಿ ಪಾನಕ ಮಾಡುವ ಸಾಹಸ ಮಾಡಿದಿರಿ. ಯಾರು ಮಾಡಿದರೂ ತುಸು ತಿಳಿಯೋ ಹುಳಿಯೋ ಆಗುವುದು, ಅನಿವಾರ್ಯವೇ. ತಿಳಿ-ಹುಳಿ ಮುಖ್ಯವಲ್ಲ. ಎಲ್ಲರ ಒಡಲು ತಣಿಸುವ ಉದ್ದೇಶ ಮುಖ್ಯ.

ಬಾಪು: ಅದೇನೆ ಇರಲಿ. ನಮ್ಮಿಬ್ಬರಿಗೂ ಜೀವನದ ಸಂಗಾತಿಗಳಾಗಿದ್ದ ಮಹಿಳೆಯರಿಗೆ ನಾವಿಬ್ಬರೂ ಕೃತಜ್ಞರಾಗಿರಬೇಕಾಗಿದೆ. ಕಸ್ತೂರಬಾ ನನಗೆ ಸತ್ಯಾಗ್ರಹ ಕಲಿಸಿದ ಗುರು; ಸಹನೆ ಕಲಿಸಿದ ತಾಯಿ, ಕಷ್ಟದಲ್ಲಿ ಸಹಭಾಗಿಯಾದ ಗೆಳತಿ. ನೀಲಾಂಬಿಕೆ-ದೇವಿಯವರ ಬಗ್ಗೆ ನನಗಷ್ಟು ತಿಳಿಯದು.

ಅಣ್ಣ: ಬಸವಣ್ಣನು ಮಂತ್ರಿಪದದಲ್ಲಿ ಉಳಿದುಕೊಳ್ಳುವಂತೆ ಮಂತ್ರ ಹಾಕಿದವಳು ಆಕೆಯೇ. ಲಿಂಗಾಂಗ ಸಾಮರಸ್ಯದ ಸಾಧನದಲ್ಲಿ ಸಹಪಾಠಿ. ಭಕ್ತಿ ಮಾರ್ಗದಲ್ಲಿ ನನಗೂ ಒಂದಡಿ ಮುಂದೆ ನಡೆದು, ಕೈಹಿಡಿದು ಕರೆದವಳು. ಕಲ್ಯಾಣದಿಂದ ಕಪ್ಪಡಿಗೆ ಬಂದು ಸಂಗಮನಾಥನಲ್ಲಿ ಐಕ್ಯವಾಗುವ ಖಟಾಟೋಪವನ್ನು ನಾನು ಮಾಡಿದರೆ; ಆಕೆ ಕಲ್ಯಾಣದಲ್ಲಿಯೇ ಕುಳಿತು, ಅಂಗೈಯೊಳಗಿನ ಲಿಂಗದ ಮುಖಾಂತರವಾಗಿಯೇ ನನ್ನೊಡನೆ ಸಂಗನಲ್ಲಿ ಐಕ್ಯಳಾದಳು. ನೀಲಾಂಬೆ! ನೀಲಲೋಚನೆ! ಆದರೆ ಕಲ್ಯಾಣ ಕೊನೆಗೆ ಕಟಗೇರಿಯೇ ಆಯಿತು.

ಬಾಪು: ಕಲ್ಯಾಣದ ಸಿದ್ಧಿಯು, ದಶದಿಕ್ಕುಗಳಿಗೆ ಪಸರಿಸುವುದಕ್ಕೆ ಒಂದು ನೆವ ಬೇಕಾಗಿತ್ತು; ಒಂದು ದಾರಿ ಬೇಕಾಗಿತ್ತು. ನಿಯತಿಯು ಆ ದಾರಿ ಮಾಡಿಕೊಂಡಳು. ಅಂಬೆಗಾಲಿಕ್ಕುವ ರಾಷ್ಟ್ರಸಭೆಯು ವಂಗಭಂಗದ ಕಾಲಕ್ಕೆ ಓಡಾಡತೊಡಗಿ, ನನ್ನ ಕಾಲಕ್ಕೆ ಜಿಗಿದಾಡಿತು, ನೆಗೆದಾಡಿತು. ಈಗ ತೆಪ್ಪಗೆ ಕುಳ್ಳಿರುವುದು; ಇಲ್ಲವೆ ಕುಂಟುತ್ತ ನಡೆಯುವುದು; ಇಲ್ಲವೆ ಯಾರ ಕೈಯನ್ನಾದರೂ ಆಸರೆಗಾಗಿ ಹಿಡಿಯಲೆಳಸುವುದು.

ಅಣ್ಣ: ಭಾರತದಲ್ಲಿ ನೀವು ಕೃಷಿ ಮಾಡಿದ ಅಗಿಗಳು ಈಗಾಗಲೇ ಜಗತ್ತಿನ ತುಂಬ ಹರಹಿಕೊಂಡಿವೆ. ದಿನದಿನಕ್ಕೂ ಅಗಿಗಳ ಬೇಡಿಕೆ ನಾಲ್ಕೂ ನಿಟ್ಟಿನಿಂದಲೂ